# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | **2310(2718)** |
| ಮಾನ್ಯ ಸದಸ್ಯರ ಹೆಸರು | ಶ್ರೀ ಸಲೀಂ ಅಹಮದ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 25.03.2022 |
| ಉತ್ತರಿಸುವ ಸಚಿವರು | ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಹಿಂದುಳಿದ ವರ್ಗದ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳಿಗೆ ಆಹಾರ ಪದಾರ್ಥಗಳನ್ನು ಸರಬರಾಜು ಮಾಡಲು ಕರೆದಿರುವ ಟೆಂಡರ್‌ಗಳಲ್ಲಿ ಅಕ್ರಮಗಳು ನಡೆದಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಯಾವ ಯಾವ ಜಿಲ್ಲೆಗಳಿಂದ ಬಂದಿರುತ್ತದೆ; (ವಿವರ ನೀಡುವುದು) | ಹೌದು.<br><br>ತುಮಕೂರು ಜಿಲ್ಲೆಯ ಹಿಂದುಳಿದ ವರ್ಗದ ವಿದ್ಯಾರ್ಥಿನಿಲಯಗಳಿಗೆ ಆಹಾರ ಸಾಮಗ್ರಿಗಳ ಸರಬರಾಜಿಗೆ ಕರೆದಿರುವ ಟೆಂಡರ್‌ನಲ್ಲಿ ಮಾರುಕಟ್ಟೆ ದರಕ್ಕಿಂತ ಕಡಿಮೆ ದರ ನಮೂದಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಆ) | ಆಹಾರ ಸಾಮಗ್ರಿಗಳ ಸರಬರಾಜುವಿಗೆ ಕರೆದಿರುವ ಟೆಂಡರ್‌ನಲ್ಲಿ ದುರುದ್ದೇಶದಿಂದ ಮಾರುಕಟ್ಟೆಯ ದರಗಳಿಗಿಂತ ಅತ್ಯಂತ ಕಡಿಮೆ ದರಗಳನ್ನು ನಮೂದಿಸಿದ್ದ ಗುತ್ತಿಗೆದಾರರಿಗೆ ಆದೇಶ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; | ಹೌದು.<br><br>ತುಮಕೂರು ಜಿಲ್ಲೆಯಲ್ಲಿನ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳಿಗೆ ಆಹಾರ ಪದಾರ್ಥಗಳ ಬೇಡಿಕೆ ಮತ್ತು ಸರಬರಾಜಿನಲ್ಲಿ ಉಂಟಾಗಿರುವ ಲೋಪದೋಷಗಳು ಮೇಲ್ನೋಟಕ್ಕೆ ಕಂಡು ಬಂದಿರುವ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಸಂ.ಹಿಂವಕ 716 ಬಿಎಂಎಸ್ 2021, ದಿನಾಂಕ 2.12.2021ರಂತೆ ಅಂದಿನ ತುಮಕೂರು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿ, ಹಾಗೂ ತುಮಕೂರು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಕಛೇರಿ ಮೇಲ್ವಿಚಾರಕರು ಇವರುಗಳನ್ನು ಇಲಾಖಾ ವಿಚಾರಣೆ ಕಾಯ್ದಿರಿಸಿ ಅಮಾನತ್ತುಗೊಳಿಸಲಾಗಿದೆ.<br><br>ಮುಂದುವರೆದು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ತುಮಕೂರು ರವರಿಗೆ ತುಮಕೂರು ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಮೆಟ್ರಿಕ್-ಪೂರ್ವ, ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳಲ್ಲಿ ಹಾಗೂ ಆಶ್ರಮಶಾಲೆಗಳಿಗೆ ಆಹಾರ ಪದಾರ್ಥಗಳ ಬೇಡಿಕೆ ಮತ್ತು ಸರಬರಾಜಿನಲ್ಲಿ ಉಂಟಾಗಿರುವ ಲೋಪದೋಷಗಳ ಬಗ್ಗೆ ವಿವರವಾದ ಮಾಹಿತಿಯನ್ನು ಒದಗಿಸುವಂತೆ ದಿನಾಂಕ 20.12.2021 ರಂದು ಕೋರಿದ್ದು, ಅದರಂತೆ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ತುಮಕೂರು ಜಿಲ್ಲೆ ಇವರು ದಿನಾಂಕ 15.03.2022ರಲ್ಲಿ |

| | | |
|---|---|---|
| | | ಮಾಹಿತಿಯನ್ನು ಸಲ್ಲಿಸಿದ್ದು, ಅಕ್ರಮದಲ್ಲಿ ಭಾಗಿಯಾದ ಅಧಿಕಾರಿ/ ಸಿಬ್ಬಂದಿ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ಕೈಗೊಳ್ಳಲು ಕ್ರಮ ವಹಿಸಲಾಗುತ್ತಿದೆ. |
| ಇ) | ಟೆಂಡರ್ ಆದೇಶ ಪಡೆದು ಗುತ್ತಿಗೆದಾರರು ಆಹಾರ ಪದಾರ್ಥಗಳನ್ನು ಸರಬರಾಜು ಮಾಡದೆ ಕಮಿಷನ್ ಹಿಡಿದುಕೊಂಡು ಬಾಕಿ ಹಣವನ್ನು ಅಧಿಕಾರಿಗಳಿಗೆ ನೀಡುತ್ತಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು? | ಆಹಾರ ಸಾಮಾಗ್ರಿಗಳ ಬೇಡಿಕೆ ಸರಬರಾಜು ಹಾಗೂ ಬಳಕೆಯಲ್ಲಿ ಅವ್ಯವಹಾರಗಳನ್ನು ತಡೆಯಲು ಇತ್ತೀಚಿಗೆ ಸರ್ಕಾರದ ಆದೇಶ ಸಂಖ್ಯೆ: ಹಿಂವಕ 578 ಬಿಎಂಎಸ್ 2021, ದಿನಾಂಕ:30.11.2021ನ್ನು ಹೊರಡಿಸಲಾಗಿದ್ದು, ಈ ಕೆಳಕಂಡ ಮಾಹಿತಿಯನ್ನು ವಿದ್ಯಾರ್ಥಿನಿಲಯ/ಆಶ್ರಮಶಾಲೆಗಳಲ್ಲಿ ಅನುದಾನ ಸೋರಿಕೆಯನ್ನು ತಪ್ಪಿಸಲು ಅಳವಡಿಸಿ ವಿದ್ಯಾರ್ಥಿನಿಲಯಗಳಲ್ಲಿ ಪ್ರಚುರಪಡಿಸಲು ಕ್ರಮ ವಹಿಸಲಾಗಿದೆ.<br><br>• ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯದ ನಿರ್ವಹಣೆಗಾಗಿ/ಆಶ್ರಮ ಶಾಲೆಗಳ ನಿರ್ವಹಣೆಗಾಗಿ ಮಂಜೂರಾಗಿರುವ ಹುದ್ದೆಗಳು ಹಾಗೂ ಭರ್ತಿಯಾಗಿರುವ ಹುದ್ದೆಗಳ ವಿವರಗಳನ್ನು ಸೂಚನಾ ಫಲಕದ ಮೇಲೆ ಅಥವಾ ವಿದ್ಯಾರ್ಥಿನಿಲಯದ ದ್ವಾರದ ಕೊಠಡಿಯ ಒಳಗಿನ ಗೋಡೆಯ ಮೇಲೆ ಹಾಕುವುದು.<br>• ವಿದ್ಯಾರ್ಥಿನಿಲಯದ ನಿಲಯಪಾಲಕರ/ವಾರ್ಡನ್ /ನಿಲಯ ಮೇಲ್ವಿಚಾರಕರ ವಿವರಗಳು, ಸಂಪರ್ಕ ವಿವರ ಹಾಗೂ ಸದರಿ ಅಧಿಕಾರಿಯು ವಿದ್ಯಾರ್ಥಿನಿಲಯದಲ್ಲಿ ಹಾಜರಿದ್ದು, ಕಾರ್ಯನಿರ್ವಹಿಸುವ ಸಮಯ.<br>• ವಿದ್ಯಾರ್ಥಿನಿಲಯದಲ್ಲಿ ನಿಯಮಾನುಸಾರ ವಾಸವಿರುವ ವಿದ್ಯಾರ್ಥಿಗಳ ಸಂಖ್ಯೆ.<br>• ವಿದ್ಯಾರ್ಥಿನಿಲಯವು ಬಾಡಿಗೆ ಕಟ್ಟಡದಲ್ಲಿ ನಡೆದಿದ್ದಲ್ಲಿ ಮಾಹೆಯಾನ ಬಾಡಿಗೆಯ ವಿವರಗಳು.<br>• ಪಡಿತರ ದರಗಳಲ್ಲಿ ಪಡೆಯಲಾಗುವ ಅಕ್ಕಿ ಮತ್ತು ಗೋದಿಯ ಸರಬರಾಜಿಗೆ ನಿಲಯಪಾಲಕರು/ವಾರ್ಡನ್ /ನಿಲಯ ಮೇಲ್ವಿಚಾರಕರು ನೀಡಿದ ಬೇಡಿಕೆ ಪಟ್ಟಿ (Indent), ಭಾರತೀಯ ಆಹಾರ ನಿಗಮದ ಗೋದಾಮುಗಳಿಂದ ಆಹಾರ ಸಾಮಗ್ರಿಗಳ ಗುತ್ತಿಗೆದಾರ ಎತ್ತುವಳಿ ಮಾಡಿದ ಪ್ರಮಾಣ ಹಾಗೂ ವಿದ್ಯಾರ್ಥಿನಿಲಯದ ಬಾಗಿಲಿಗೆ ಸರಬರಾಜು ಮಾಡಿದ ಅಕ್ಕಿ, ಗೋದಿ ಪ್ರಮಾಣ ಹಾಗೂ ದಿನಾಂಕ, ಸಮಯ, ವಾಹನ ಸಂಖ್ಯೆ, ಡೆಲಿವರಿ ನೋಟ್ ಹಾಗೂ ಸಂಬಂಧಪಟ್ಟ ವಹಿಯಲ್ಲಿ (Stock Register) ದಾಖಲಿಸಿದ ಪ್ರತಿ.<br>• ಉಳಿದ ಎಲ್ಲಾ ಆಹಾರ ಸಾಮಗ್ರಿಗಳಿಗೆ ನಿಲಯಪಾಲಕರು/ವಾರ್ಡನ್/ನಿಲಯಮೇಲ್ವಿಚಾರಕರು ಪ್ರತಿ ತಿಂಗಳು ಆಹಾರ ಸಾಮಗ್ರಿಗಳ ಸರಬರಾಜು ಮಾಡುವ ಗುತ್ತಿಗೆದಾರರಿಗೆ ನೀಡುತ್ತಿರುವ ಬೇಡಿಕೆ ಪಟ್ಟಿ (Indent) ಪ್ರತಿ ಹಾಗೂ ಆಹಾರ ಸಾಮಗ್ರಿಗಳ ಸರಬರಾಜು ಮಾಡುವ ಗುತ್ತಿಗೆದಾರ ವಿದ್ಯಾರ್ಥಿನಿಲಯದ ಬಾಗಿಲಿಗೆ ಆಹಾರ ಸಾಮಗ್ರಿಗಳನ್ನು ಸರಬರಾಜು ಮಾಡಿದ ದಿನಾಂಕ, ಸಮಯ, ವಾಹನ ಸಂಖ್ಯೆ ಡೆಲಿವರಿ ನೋಟ್ |

| | | |
|---|---|---|
| | | ಹಾಗೂ ಸಂಬಂಧಪಟ್ಟ ವಹಿಯಲ್ಲಿ (Stock Register) ಸಾಮಗ್ರಿಗಳನ್ನು ದಾಖಲಿಸಿದ ಪ್ರತಿ.<br>• ವಿದ್ಯಾರ್ಥಿನಿಲಯದಲ್ಲಿ ಪ್ರತಿ ದಿನ ವಿದ್ಯಾರ್ಥಿಗಳಿಗೆ ನೀಡಲು ಹಾಲು ಸರಬರಾಜಿಗೆ ನೀಡಿದ ಬೇಡಿಕೆ ಪಟ್ಟಿಯ ಪ್ರತಿ.(Indent).<br>• ವಾರಕ್ಕೆ ತರಕಾರಿ, ಹಣ್ಣು, ಮೊಟ್ಟೆ, ಕೋಳಿ ಮಾಂಸ ಸರಬರಾಜು ಮಾಡಲು ಬೇಡಿಕೆ ಪ್ರತಿ(Indent) ಆಹಾರ ಸಾಮಗ್ರಿಗಳ ಸರಬರಾಜು ಮಾಡುವ ಗುತ್ತಿಗೆದಾರ ವಿದ್ಯಾರ್ಥಿನಿಲಯದ ಬಾಗಿಲಿಗೆ ಆಹಾರ ಸಾಮಗ್ರಿಗಳನ್ನು ಸರಬರಾಜು ಮಾಡಿದ ದಿನಾಂಕ, ಸಮಯ, ವಾಹನ ನೊಂದಣಿ ಸಂಖ್ಯೆ, ಡೆಲಿವರಿ ನೋಟ್ ಹಾಗೂ ಸಂಬಂಧಪಟ್ಟ ವಹಿಯಲ್ಲಿ (Stock Register) ಸಾಮಗ್ರಿಗಳನ್ನು ದಾಖಲಿಸಿದ ಪ್ರತಿ.<br>• ಪ್ರತಿ ಮಾಹೆ ವಿದ್ಯಾರ್ಥಿನಿಲಯದಲ್ಲಿ ನಿರ್ವಹಣೆಗಾಗಿ ಭರಿಸುತ್ತಿರುವ ಇತರೆ ವೆಚ್ಚಗಳ ವಿವರ.<br>• ಯಶಸ್ವಿ ಗುತ್ತಿಗೆದಾರರ ಜೊತೆ ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮಾಡಿಕೊಂಡಿರುವ ಒಪ್ಪಂದದ ಪ್ರತಿ<br>• ಆಹಾರ ಸಾಮಗ್ರಿಗಳನ್ನು ಸರಬರಾಜು ಮಾಡಲು ಬೇಡಿಕೆ ಪಟ್ಟಿ (indent) ನೀಡುವಾಗ ವಿದ್ಯಾರ್ಥಿನಿಲಯದಲ್ಲಿ ನಿಯಮಾನುಸಾರ ವಾಸಿಸುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯ ಆಧಾರದ ಮೇಲೆ ನೀಡುವುದು.<br>• ಸರ್ಕಾರದ ಆದೇಶ ಸಂಖ್ಯೆ: ಹಿಂವಕ 586 ಬಿಎಂಎಸ್ 2018, ದಿನಾಂಕ:07.04.2018ರಲ್ಲಿ ಸ್ಪಷ್ಟವಾಗಿ ತಿಳಿಸಿರುವಂತೆ, ಪ್ರತಿ ವಿದ್ಯಾರ್ಥಿನಿಲಯಕ್ಕೆ/ಆಶ್ರಮ ಶಾಲೆಗೆ ಅಗತ್ಯವಿರುವ ಪದಾರ್ಥಗಳನ್ನು ಗುತ್ತಿಗೆದಾರರು ವಿದ್ಯಾರ್ಥಿನಿಲಯಗಳ/ಶಾಲೆಗಳ ಬಾಗಿಲಿಗೆ ಸರಬರಾಜು ಮಾಡುವುದು. ವಿದ್ಯಾರ್ಥಿನಿಲಯದ/ವಸತಿ ಶಾಲೆಯ ಬಾಗಿಲಲ್ಲಿ ತೂಕ ಮಾಡಿ ತಲುಪಿಸುತ್ತಿರುವ ಭಾವಚಿತ್ರಗಳನ್ನು digital form ನಲ್ಲಿ ದಾಖಲಿಕರಣ ಮಾಡಿಕೊಳ್ಳುವುದು ಹಾಗೂ ಸದರಿ ದಾಖಲಾತಿಗಳನ್ನು ನಿಯಮಾನುಸಾರ ಪರಿಶೀಲಿಸಿ ಉಳಿದ ದಾಖಲಾತಿಗಳ ಜೊತೆಯಲ್ಲಿ ಅರ್ಹತೆಯ ಅನುಸಾರ ಗುತ್ತಿಗೆದಾರರಿಗೆ ಮೊತ್ತವನ್ನು ಪಾವತಿಸುವುದು.<br>• ಯಾವುದೇ ಕಾರಣಕ್ಕೂ ನಿಲಯಪಾಲಕರ/ವಾರ್ಡನ್ /ನಿಲಯ ಮೇಲ್ವಿಚಾರಕರ ಮೇಲೆ ಆಹಾರ ಸಾಮಗ್ರಿಗಳ ಸರಬರಾಜಿನ ಹೊಣೆಗಾರಿಕೆಯನ್ನು ವಹಿಸಬಾರದು. ಆಹಾರ ಪದಾರ್ಥಗಳನ್ನು ವಿದ್ಯಾರ್ಥಿನಿಲಯಗಳ/ ಆಶ್ರಮಶಾಲೆಗಳ ಬಾಗಿಲಿಗೆ ಸರಬರಾಜು ಮಾಡುವುದು ಗುತ್ತಿಗೆದಾರರ ಜವಾಬ್ದಾರಿಯಾಗಿರುತ್ತದೆ. ಈ ನಿಯಮದ ಅಚ್ಚುಕಟ್ಟು ಪಾಲನೆಯನ್ನು ಸಂಪೂರ್ಣವಾಗಿ ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯವರು ನಿರ್ವಹಿಸತಕ್ಕದ್ದು, ಲೋಪದೋಷ ಕಂಡು ಬಂದಲ್ಲಿ ಅವರನ್ನು ಜವಬ್ದಾರರನ್ನಾಗಿ ಮಾಡಲಾಗುವುದು. |

| | | |
|---|---|---|
| | | • ಆಹಾರ ಸಾಮಾಗ್ರಿಗಳ ಸರಬರಾಜು ಅಥವಾ ಗುಣಮಟ್ಟದಲ್ಲಿ ಲೋಪದೋಷಗಳು ಕಂಡುಬಂದಲ್ಲಿ ಆಹಾರ ಸಾಮಾಗ್ರಿಗಳ ಸರಬರಾಜು ಗುತ್ತಿಗೆದಾರರಿಗೆ ವಿಧಿಸಿರುವ ದಂಡದ ವಿವರಗಳು ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ರವರ ಕಚೇರಿಯಲ್ಲಿ ಕಡ್ಡಾಯವಾಗಿ ನಿರ್ವಹಿಸತಕ್ಕದ್ದು.<br>• ಕನಿಷ್ಠ 2 ತಿಂಗಳಿಗಳಿಗೊಮ್ಮೆ ನಿಲಯಪಾಲಕರ/ವಾರ್ಡನ್/ನಿಲಯ ಮೇಲ್ವಿಚಾರಕರ; ತಾಲ್ಲೂಕು ಕಲ್ಯಾಣಾಧಿಕಾರಿ, ಹಾಗೂ ಆಹಾರ ಸಾಮಗ್ರಿ ಸರಬರಾಜು ಮಾಡುವ ಗುತ್ತಿಗೆದಾರರನ್ನೊಳಗೊಂಡ ಸಭೆಯನ್ನು ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರು ಏರ್ಪಡಿಸುವುದು.<br>• ಮೇಲಿನ ಎಲ್ಲಾ ಅಂಶಗಳು ಪಾಲನೆಯಾಗುತ್ತಿರುವ ಬಗ್ಗೆ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರು ಅನುಪಾಲನಾ ವರದಿಯನ್ನು ಸಲ್ಲಿಸುವುದು. ಪ್ರತಿ ದಿನ ಇಲಾಖೆಯಲ್ಲಿರುವ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ಮತ್ತು ಆಶ್ರಮ ಶಾಲೆಗಳಲ್ಲಿ ಸಿಬ್ಬಂದಿ ಹಾಜರಾತಿ ವಿವರಗಳು ಮತ್ತು ಆ ದಿನದ ಮೆನು ಹಾಗೂ ಅದರ ಪ್ರಕಾರ ಉಗ್ರಾಣದಿಂದ ಸೆಳೆಯಲಾದ ಅಹಾರ ಪದಾರ್ಥಗಳು ಹಾಗೂ ಅದರ ಪ್ರಮಾಣ ಮತ್ತು ಸದರಿ ಆಶ್ರಮ ಶಾಲೆಗಳು ಹಾಗೂ ವಿದ್ಯಾರ್ಥಿ ನಿಲಯಗಳಲ್ಲಿ ವಿದ್ಯಾರ್ಥಿಗಳ ಹಾಜರಾತಿ ವಿವರಗಳನ್ನು ಸಾರ್ವಜನಿಕ ವಲಯದಲ್ಲಿ ಪ್ರಚುರಪಡಿಸಲು ಕ್ರಮ ತೆಗೆದುಕೊಳ್ಳಲಾಗಿವೆ. ಅದೇ ರೀತಿ ಜಿಲ್ಲಾವಾರು, ತಾಲ್ಲೂಕುವಾರು, ಆಶ್ರಮಶಾಲೆವಾರು/ವಿದ್ಯಾರ್ಥಿನಿಲಯವಾರು ಮಂಜೂರಾತಿ ಮತ್ತು ದಾಖಲಾತಿ ಮತ್ತು ಹಾಲಿ ಇರುವ ವಿವರಗಳನ್ನು ಸಹ ಸಾರ್ವಜನಿಕ ವಲಯದಲ್ಲಿ ಪ್ರಚುರಪಡಿಸಲು ಕ್ರಮ ತೆಗೆದುಕೊಳ್ಳಲಾಗಿದೆ.<br>ಸದರಿ ಆದೇಶದ ಪ್ರತಿಯನ್ನು **ಅನುಬಂಧ**ದಲ್ಲಿ ನೀಡಲಾಗಿದೆ. |

**ಸಂಖ್ಯೆ: ಹಿಂವಕ 275 ಬಿಎಂಎಸ್ 2022**

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ ಹಿಂದುಳಿದ
ವರ್ಗಗಳ ಕಲ್ಯಾಣ ಸಚಿವರು

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ, ಆಶ್ರಮ ಶಾಲೆಗಳ ಹಾಗೂ ಕ್ರೈಸ್ ಸಂಸ್ಥೆಯ ಅಧೀನದಲ್ಲಿ ಬರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಸತಿ ಶಾಲೆಗಳ/ಪದವಿ ಪೂರ್ವ ಕಾಲೇಜುಗಳ ನಿರ್ವಹಣೆ ಕುರಿತು.

ಓದಲಾಗಿದೆ: ಸರ್ಕಾರದ ಆದೇಶ ಸಂಖ್ಯೆ: ಹಿಂವಕ 586 ಬಿಎಂಎಸ್ 2018, ದಿನಾಂಕ: 07.04.2018.

*****

ಪ್ರಸ್ತಾವನೆ:

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳು, ಆಶ್ರಮ ಶಾಲೆಗಳು ಹಾಗೂ ಕ್ರೈಸ್ ಸಂಸ್ಥೆಯ ಅಧೀನದಲ್ಲಿ ಬರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಸತಿ ಶಾಲೆಗಳ/ಪದವಿ ಪೂರ್ವ ಕಾಲೇಜುಗಳ ನಿರ್ವಹಣೆಯಾಗುತ್ತಿದೆ. ಶೈಕ್ಷಣಿಕ ವರ್ಷ 2020-21ರಲ್ಲಿ ಕೋವಿಡ್-19 ವ್ಯಾಪಕವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ವಸತಿ ಶಾಲೆಗಳು, ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು ಮತ್ತು ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸಿರುವುದಿಲ್ಲ. ಪ್ರಸ್ತುತ 2021-22 ಶೈಕ್ಷಣಿಕ ವರ್ಷಕ್ಕಾಗಿ ಶಾಲಾ ಕಾಲೇಜುಗಳು ಇತ್ತೀಚೆಗೆ ತೆರೆದಿರುವುದರಿಂದ ವಿದ್ಯಾರ್ಥಿನಿಲಯಗಳು ಸಹ ಈಗ ಸಂಪೂರ್ಣವಾಗಿ ಕಾರ್ಯಗತವಾಗಿರುತ್ತದೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳಲ್ಲಿ ವಾಸಿಸುತ್ತಿರುವ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ, ಪಾರದರ್ಶಕವಾಗಿ ವಿದ್ಯಾರ್ಥಿನಿಲಯ ನಿರ್ವಹಣೆಗಾಗಿ ಹಾಗೂ ಸರ್ಕಾರವು ವಿದ್ಯಾರ್ಥಿನಿಲಯಗಳ ನಿರ್ವಹಣೆಗಾಗಿ ನಿಗದಿಪಡಿಸಿರುವ ಅನುದಾನವು ಸದ್ಬಳಕೆಯಾಗುವ ಹಿತದೃಷ್ಟಿಯಿಂದ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗುತ್ತಿದೆ.

**ಸರ್ಕಾರದ ಆದೇಶ ಸಂಖ್ಯೆ:ಹಿಂವಕ 578 ಬಿಎಂಎಸ್ 2021**
**ಬೆಂಗಳೂರು, ದಿನಾಂಕ:30.11.2021**

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವ್ಯಾಪ್ತಿಯಡಿ ಬರುವ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು, ಆಶ್ರಮ ಶಾಲೆಗಳು ಆಹಾರ ಸಾಮಗ್ರಿಗಳನ್ನು ಸರಬರಾಜು ಮಾಡುವ ವ್ಯವಸ್ಥೆಯನ್ನು ಮೇಲೆ ಓದಲಾದ ಸರ್ಕಾರದ ಆದೇಶ ಸಂಖ್ಯೆ: ಹಿಂವಕ 586 ಬಿಎಂಎಸ್ 2018, ದಿನಾಂಕ:07.04.2018ರಲ್ಲಿ ನೀಡಲಾಗಿದೆ. ಅದರಂತೆ, ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಆಹಾರ ಪದಾರ್ಥಗಳ ಟೆಂಡರ್ ಕರೆಯಲು ಸಮಿತಿಯನ್ನು ರಚಿಸಲಾಗಿದ್ದು, ಪ್ರತಿ ವರ್ಷ ಟೆಂಡರ್‌ನ್ನು ಆಹ್ವಾನಿಸಲು ಸೂಚನೆ ನೀಡಲಾಗಿದೆ. ಮುಂದುವರೆದು, ಪ್ರತಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗೆ ಮಾಹೆಯಾನ ರೂ.1500/-ರಂತೆ, ಮೆಟ್ರಿಕ್ ನಂತರ ವಿದ್ಯಾರ್ಥಿಗೆ ರೂ.1600/-ರಂತೆ, ಆಶ್ರಮ ಶಾಲೆಯ ಪ್ರತಿ ವಿದ್ಯಾರ್ಥಿಗೆ ರೂ.1200/-ರಂತೆ ನಿರ್ವಹಣೆ ವೆಚ್ಚ ಭರಿಸುವುದಕ್ಕೆ ನಿಯಮಾನುಸಾರ ಅವಕಾಶವಿರುತ್ತದೆ. ಗುಣಮಟ್ಟ ಆಹಾರ ಪದಾರ್ಥಗಳನ್ನು ವಿದ್ಯಾರ್ಥಿಗಳಿಗೆ ನೀಡುವ ಪಾರದರ್ಶಕ ವ್ಯವಸ್ಥೆ ಹಾಗೂ ಅನುದಾನ ಸೋರಿಕೆ ತಪ್ಪಿಸಲು ಈ ಕೂಡಲೇ ವಿದ್ಯಾರ್ಥಿನಿಲಯ/ಆಶ್ರಮಶಾಲೆ/ವಸತಿಶಾಲೆಗಳಲ್ಲಿ ಈ ಕೆಳಕಂಡ ಸೂಚನೆಗಳನ್ನು ಪಾಲಿಸುವುದು ಹಾಗೂ ಕೆಳಗೆ ಸೂಚಿಸಿದ ನಮೂನೆಗಳಲ್ಲಿ ಮಾಹಿತಿಯನ್ನು ಸೂಚನಾ ಫಲಕದ ಮೇಲೆ ಅಥವಾ ವಿದ್ಯಾರ್ಥಿನಿಲಯದ/ಆಶ್ರಮಶಾಲೆ/ಕ್ರೈಸ್ ಸಂಸ್ಥೆಯ ಅಧೀನದಲ್ಲಿ ಬರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಸತಿ ಶಾಲೆಗಳ/ಪದವಿ ಪೂರ್ವ ಕಾಲೇಜುಗಳ ಸೂಚನಾ ಫಲಕ ಅಥವಾ ಪ್ರವೇಶದ್ವಾರದ ಕೊಠಡಿಯ ಒಳಗಿನ ಗೋಡೆಯ ಮೇಲೆ ಹಾಕುವುದು.

--2

30/11/2021

ಹಿಂದುಳಿದ ವರ್ಗಗಳ ಇಲಾಖೆಯ ಅಡಿಯಲ್ಲಿ ನಿರ್ವಹಣೆಯಾಗುತ್ತಿರುವ ಎಲ್ಲಾ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳಲ್ಲಿ ಹಾಗೂ ಆಶ್ರಮ ಶಾಲೆಗಳಲ್ಲಿ ಈ ಕೆಳಗಿನಂತೆ ನಿರ್ದೇಶನಗಳನ್ನು ಪಾಲನೆ ಮಾಡಲು ಕೂಡಲೇ ಕ್ರಮ ತೆಗೆದುಕೊಳ್ಳುವುದು. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ರವರು ಸೂಚನೆಗಳ ಪಾಲನೆಯಾಗಿರುವ ಬಗ್ಗೆ 10 ದಿನದೊಳಗೆ ಸರ್ಕಾರಕ್ಕೆ ವರದಿ ನೀಡುವುದು. ಅದೇರೀತಿ ನೀಡಿರುವ ಎಲ್ಲಾ ಸೂಚನೆಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧೀನದಲ್ಲಿ ನಡೆಯುತ್ತಿರುವ ಕ್ರೈಸ್ ಸಂಸ್ಥೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳು ಹಾಗೂ ಕಾಲೇಜುಗಳಿಗೂ ಸಹ ಅನ್ವಯಿಸುತ್ತಿದೆ. ಕಾರ್ಯನಿರ್ವಾಹಕ ನಿರ್ದೇಶಕರು, ಕ್ರೈಸ್ ಸಂಸ್ಥೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅನುದಾನದಲ್ಲಿ ನಡೆಯುತ್ತಿರುವ ಕ್ರೈಸ್ ವಸತಿ ಶಾಲೆಗಳು ಹಾಗೂ ಪದವಿ ಪೂರ್ವ ಕಾಲೇಜುಗಳಿಗೆ ಅನ್ವಯವಾಗುವಂತೆ, ಸೂಕ್ತ ನಿರ್ದೇಶನಗಳನ್ನು ಸಂಬಂಧಪಟ್ಟವರಿಗೆ ನೀಡಿ ಅನುಪಾಲನಾ ವರದಿಯನ್ನು ಈ ಇಲಾಖೆಗೆ 10 ದಿನದೊಳಗೆ ಕಳುಹಿಸತಕ್ಕದ್ದು.

## ನಮೂನೆ-1

1. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯದಲ್ಲಿ ವಿದ್ಯಾರ್ಥಿನಿಲಯದ ನಿರ್ವಹಣೆಗಾಗಿ/ಆಶ್ರಮ ಶಾಲೆಗಳ ನಿರ್ವಹಣೆಗಾಗಿ ಮಂಜೂರಾಗಿರುವ ಹುದ್ದೆಗಳು ಹಾಗೂ ಭರ್ತಿಯಾಗಿರುವ ಹುದ್ದೆಗಳ ವಿವರಗಳನ್ನು ಕೆಳಕಂಡ ನಮೂನೆಯಂತೆ ಭರ್ತಿಮಾಡಿ A-4 ಅಳತೆಯ ಹಾಳೆಯಲ್ಲಿ ಪ್ರಿಂಟ್ ಔಟ್ ತೆಗೆದುಕೊಂಡು ಸೂಚನಾ ಫಲಕದ ಮೇಲೆ ಅಥವಾ ವಿದ್ಯಾರ್ಥಿನಿಲಯದ ಪ್ರವೇಶ ದ್ವಾರದ ಕೊಠಡಿಯ ಒಳಗಿನ ಗೋಡೆಯ ಮೇಲೆ ಹಾಕುವುದು.

| ವಿದ್ಯಾರ್ಥಿನಿಲಯದ ಹೆಸರು, ಸಂಪೂರ್ಣ ವಿಳಾಸ ಮತ್ತು BCWD ಯಿಂದ ನೀಡಿರುವ ವಿದ್ಯಾರ್ಥಿನಿಲಯದ ಸಂಖ್ಯೆ | ವಿದ್ಯಾರ್ಥಿನಿಲಯದಲ್ಲಿ ಮಂಜೂರಾಗಿರುವ ಹುದ್ದೆಗಳು ಹಾಗೂ ವಿವರ (Total Posts Sanctioned) | ಖಾಯಂ ನೇಮಕಾತಿ ಮೂಲಕ ತುಂಬಿರುವ ಹುದ್ದೆಗಳು ಹಾಗೂ ಸಿಬ್ಬಂದಿಗಳ ವಿವರ | | ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವವರ ವಿವರ ಹಾಗೂ ಹುದ್ದೆ. |
|---|---|---|---|---|
| | | ಹೆಸರು | ಪದನಾಮ | |
| | | | | |

## ನಮೂನೆ-2

2. ವಿದ್ಯಾರ್ಥಿನಿಲಯದ ನಿಲಯಪಾಲಕರ/ವಾರ್ಡನ್/ನಿಲಯ ಮೇಲ್ವಿಚಾರಕರ ವಿವರಗಳು:

| | |
|---|---|
| ಹೆಸರು ಮತ್ತು ಪದನಾಮ ಹಾಗೂ ಸಂಪರ್ಕದ ವಿವರಗಳು | |
| ಸದರಿ ಅಧಿಕಾರಿಯು ವಿದ್ಯಾರ್ಥಿನಿಲಯದಲ್ಲಿ ಹಾಜರಿದ್ದು ಕಾರ್ಯನಿರ್ವಹಿಸುವ ಸಮಯ | |

---3

30/11/2021

## ನಮೂನೆ-3

3. ವಿದ್ಯಾರ್ಥಿನಿಲಯದಲ್ಲಿ ಹಾಲಿ ಇರುವ ವಿದ್ಯಾರ್ಥಿಗಳ ಸಂಖ್ಯೆ:-

| ವಿದ್ಯಾರ್ಥಿನಿಲಯದ ಹೆಸರು, ಸಂಪೂರ್ಣ ವಿಳಾಸ ಮತ್ತು BCWD ಯಿಂದ ನೀಡಿರುವ ವಸತಿ ನಿಲಯದ ಸಂಖ್ಯೆ | ವಿದ್ಯಾರ್ಥಿ ನಿಲಯದ ಮಂಜೂರಾತಿ ಸಂಖ್ಯಾಬಲ (Sanctioned strength) | ದಾಖಲಾತಿ ಪಡೆಯಲು ಅನುಮೋದಿಸಿರುವ ವಿದ್ಯಾರ್ಥಿಗಳ ಸಂಖ್ಯೆ (Enrolled strength) | ವಿದ್ಯಾರ್ಥಿ ನಿಲಯದಲ್ಲಿ ವಾಸಿಸುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ (Number of students who have actually joined and are residing in the hostel) |
|---|---|---|---|
| | | | |

## ನಮೂನೆ-4

4. ವಿದ್ಯಾರ್ಥಿನಿಲಯವು ಬಾಡಿಗೆ ಕಟ್ಟಡದಲ್ಲಿ ನಡೆದಿದ್ದಲ್ಲಿ ಮಾಹೆಯಾನ ಬಾಡಿಗೆಯ ವಿವರಗಳು:-

| ವಿದ್ಯಾರ್ಥಿನಿಲಯದ ಹೆಸರು, ಸಂಪೂರ್ಣ ವಿಳಾಸ ಮತ್ತು BCWD ಯಿಂದ ನೀಡಿರುವ ವಸತಿ ನಿಲಯದ ಸಂಖ್ಯೆ | ಪ್ರತಿ ಮಾಹೆ ಪಾವತಿ ಮಾಡುತ್ತಿರುವ ಬಾಡಿಗೆಯ ವಿವರ |
|---|---|
| | |

ಮುಂದುವರೆದು, ಈ ಕೆಳಕಂಡ ಪ್ರತಿಗಳನ್ನು ಸಹ ವಿದ್ಯಾರ್ಥಿನಿಲಯಗಳ/ಆಶ್ರಮಶಾಲೆಗಳ/ಕ್ರೈಸ್ ಸಂಸ್ಥೆಯ ಅಧೀನದಲ್ಲಿ ಬರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಸತಿ ಶಾಲೆಗಳ/ಪದವಿ ಪೂರ್ವ ಕಾಲೇಜುಗಳ ಸೂಚನಾ ಫಲಕದ ಮೇಲೆ ಅಥವಾ ವಿದ್ಯಾರ್ಥಿನಿಲಯದ ಪ್ರವೇಶ ದ್ವಾರದ ಕೊಠಡಿಯ ಒಳಗಿನ ಗೋಡೆಯ ಮೇಲೆ ಹಾಕುವುದು.

## ನಮೂನೆ-5

5. ಪಡಿತರ ದರಗಳಲ್ಲಿ ಪಡೆಯಲಾಗುವ ಅಕ್ಕಿ ಮತ್ತು ಗೋದಿಯ ಸರಬರಾಜಿಗೆ ನಿಲಯಪಾಲಕರು/ವಾರ್ಡನ್/ನಿಲಯ ಮೇಲ್ವಿಚಾರಕರು ನೀಡಿದ ಬೇಡಿಕೆ ಪಟ್ಟಿ (Indent), ಭಾರತೀಯ ಆಹಾರ ನಿಗಮದ ಗೋದಾಮುಗಳಿಂದ ಆಹಾರ ಸಾಮಗ್ರಿಗಳ ಗುತ್ತಿಗೆದಾರ ಎತ್ತುವಳಿ ಮಾಡಿದ ಪ್ರಮಾಣ ಹಾಗೂ ವಿದ್ಯಾರ್ಥಿನಿಲಯದ ಬಾಗಿಲಿಗೆ ಸರಬರಾಜು ಮಾಡಿದ ಅಕ್ಕಿ, ಗೋದಿ ಪ್ರಮಾಣ ಹಾಗೂ ದಿನಾಂಕ, ಸಮಯ, ವಾಹನ ಸಂಖ್ಯೆ, ಡೆಲಿವರಿ ನೋಟ್ ಹಾಗೂ ಸಂಬಂಧಪಟ್ಟ ವಹಿಯಲ್ಲಿ (Stock Register) ದಾಖಲಿಸಿದ ಪ್ರತಿ.

## ನಮೂನೆ-6 & 7

6. ಉಳಿದ ಎಲ್ಲಾ ಆಹಾರ ಸಾಮಗ್ರಿಗಳಿಗೆ ನಿಲಯಪಾಲಕರು/ವಾರ್ಡನ್/ನಿಲಯ ಮೇಲ್ವಿಚಾರಕರು ಪ್ರತಿ ತಿಂಗಳು ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಮೂಲಕ ಆಹಾರ ಸಾಮಗ್ರಿಗಳ ಸರಬರಾಜು ಮಾಡುವ ಗುತ್ತಿಗೆದಾರರಿಗೆ ನೀಡುತ್ತಿರುವ

--4

30/11/2021

ಬೇಡಿಕೆ ಪಟ್ಟಿ (Indent) ಪ್ರತಿ ಹಾಗೂ ಆಹಾರ ಸಾಮಗ್ರಿಗಳ ಸರಬರಾಜು ಮಾಡುವ ಗುತ್ತಿಗೆದಾರ ವಿದ್ಯಾರ್ಥಿ ನಿಲಯದ ಬಾಗಿಲಿಗೆ ಆಹಾರ ಸಾಮಗ್ರಿಗಳನ್ನು ಸರಬರಾಜು ಮಾಡಿದ ದಿನಾಂಕ, ಸಮಯ, ವಾಹನ ಸಂಖ್ಯೆ ಡೆಲಿವರಿ ನೋಟ್ ಹಾಗೂ ಸಂಬಂಧಪಟ್ಟ ವಹಿಯಲ್ಲಿ (Stock Register) ಸಾಮಗ್ರಿಗಳನ್ನು ದಾಖಲಿಸಿದ ಪ್ರತಿ.

**ನಮೂನೆ-8**

7. ವಿದ್ಯಾರ್ಥಿನಿಲಯದಲ್ಲಿ ಪ್ರತಿ ದಿನ ವಿದ್ಯಾರ್ಥಿಗಳಿಗೆ ನೀಡಲು ಹಾಲು ಸರಬರಾಜಿಗೆ ನೀಡಿದ ಬೇಡಿಕೆ ಪಟ್ಟಿಯ ಪ್ರತಿ.(Indent).

**ನಮೂನೆ-9**

8. ವಾರಕ್ಕೆ ತರಕಾರಿ, ಹಣ್ಣು, ಮೊಟ್ಟೆ, ಕೋಳಿ ಮಾಂಸ ಸರಬರಾಜು ಮಾಡಲು ಬೇಡಿಕೆ ಪ್ರತಿ(Indent) ಆಹಾರ ಸಾಮಗ್ರಿಗಳ ಸರಬರಾಜು ಮಾಡುವ ಗುತ್ತಿಗೆದಾರ ವಿದ್ಯಾರ್ಥಿನಿಲಯದ ಬಾಗಿಲಿಗೆ ಆಹಾರ ಸಾಮಗ್ರಿಗಳನ್ನು ಸರಬರಾಜು ಮಾಡಿದ ದಿನಾಂಕ, ಸಮಯ, ವಾಹನ ನೊಂದಣಿ ಸಂಖ್ಯೆ, ಡೆಲಿವರಿ ನೋಟ್ ಹಾಗೂ ಸಂಬಂಧಪಟ್ಟ ವಹಿಯಲ್ಲಿ (Stock Register) ಸಾಮಗ್ರಿಗಳನ್ನು ದಾಖಲಿಸಿದ ಪ್ರತಿ.

**ನಮೂನೆ-10**

9. ಪ್ರತಿ ಮಾಹೆ ವಿದ್ಯಾರ್ಥಿನಿಲಯದಲ್ಲಿ ನಿರ್ವಹಣೆಗಾಗಿ ಭರಿಸುತ್ತಿರುವ ಇತರೆ ವೆಚ್ಚಗಳ ವಿವರ.

| ಇತರೆ ನಿರ್ವಹಣೆಯ ವಿಷಯ | ಭರಿಸಲಾದ ವೆಚ್ಚ (ಮಾಹೆ) |
|---|---|
| ಆಹಾರ ಧನ್ಯಗಳು (ಅಕ್ಕಿ, ಗೋಧಿ) | |
| ಇತರೆ ಆಹಾರ ಪದಾರ್ಥಗಳು | |
| ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಪಡೆಯುತ್ತಿರುವ ದಿನಪತ್ರಿಕೆ/ವಾಸಿಕ ಪತ್ರಿಕೆ | |
| ಅರೆಕಾಲಿಕ ಭೋದಕರ ವೆಚ್ಚ (ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಿಗೆ) | |
| ವಿದ್ಯುತ್ ಬಿಲ್, ನೀರಿನ ಬಿಲ್ | |
| ಇತರೆ ವಿದ್ಯುತ್ ಸಾಮಗ್ರಿಗಳ ವೆಚ್ಚ | |
| ಶೌಚಾಲಯ ನೈರ್ಮಲ್ಯ ಸಾಮಗ್ರಿಗಳು | |
| ಶೌಚಾಲಯ ಶುಚಿತ್ವಕ್ಕಾಗಿ ಭರಿಸಿದ ವೆಚ್ಚ | |
| ಇತರೆ ವೆಚ್ಚ | |

10. ಯಶಸ್ವಿ ಗುತ್ತಿಗೆದಾರರ ಜೊತೆ ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮಾಡಿಕೊಂಡಿರುವ ಒಪ್ಪಂದದ ಪ್ರತಿ ಎಲ್ಲಾ ವಸತಿ ನಿಲಯಗಳಲ್ಲಿ ಕೂಡಲೇ ಲಭ್ಯವಿರತಕ್ಕದ್ದು(ಕಾರಣ ಜಿಲ್ಲಾ ಮಟ್ಟದಲ್ಲಿ ಕರಾರು ಒಪ್ಪಂದ ಷರತ್ತು ಮತ್ತು ನಿಬಂಧನೆಗಳಂತೆ ಆಹಾರ ಸರಬರಾಜು ಆಗುತ್ತಿದೆಯೋ ಇಲ್ಲವೋ ಎಂಬ ಬಗ್ಗೆ ಮಾಹಿತಿ ನಿಲಯಪಾಲಕರ/ವಾರ್ಡನ್/ನಿಲಯ ಮೇಲ್ವಿಚಾರಕರ ಹಂತದಲ್ಲಿ ಲಭ್ಯತೆ ಅಗತ್ಯವಾಗಿರುತ್ತದೆ).

--5

30/11/2021

11.ಆಹಾರ ಸಾಮಗ್ರಿಗಳನ್ನು ಸರಬರಾಜು ಮಾಡಲು ಬೇಡಿಕೆ ಪಟ್ಟಿ (indent) ನೀಡುವಾಗ ವಿದ್ಯಾರ್ಥಿನಿಲಯದಲ್ಲಿ ನಿಯಮಾನುಸಾರ ವಾಸಿಸುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯ ಆಧಾರದ ಮೇಲೆ ನೀಡುವುದು.

12.ಮೇಲೆ ಓದಲಾದ ಸರ್ಕಾರದ ಆದೇಶ ಸಂಖ್ಯೆ: ಹಿಂವಕ 586 ಬಿಎಂಎಸ್ 2018, ದಿನಾಂಕ: 07.04.2018ರಲ್ಲಿ ಸ್ಪಷ್ಟವಾಗಿ ತಿಳಿಸಿರುವಂತೆ, ಪ್ರತಿ ವಿದ್ಯಾರ್ಥಿನಿಲಯಕ್ಕೆ/ಆಶ್ರಮಶಾಲೆಗೆ ಅಗತ್ಯವಿರುವ ಆಹಾರ ಪದಾರ್ಥಗಳನ್ನು ಗುತ್ತಿಗೆದಾರರು ವಿದ್ಯಾರ್ಥಿ ನಿಲಯಗಳ/ಶಾಲೆಗಳ ಬಾಗಿಲಿಗೆ ಸರಬರಾಜುಮಾಡುವುದು. ವಿದ್ಯಾರ್ಥಿ ನಿಲಯದ/ ವಸತಿ ಶಾಲೆಯ ಬಾಗಿಲಲ್ಲಿ ತೂಕ ಮಾಡಿ ತಲುಪಿಸುತ್ತಿರುವ ಭಾವಚಿತ್ರಗಳನ್ನು digital form ನಲ್ಲಿ ದಾಖಲಿಕರಣ ಮಾಡುವುದು ಹಾಗೂ ಸದರಿ ದಾಖಲಾತಿಗಳನ್ನು ಸಹ ನಿಯಮಾನುಸಾರ ಪರಿಶೀಲಿಸಿ ಉಳಿದ ದಾಖಲಾತಿಗಳ ಜೊತೆಯಲ್ಲಿ ಅರ್ಹತೆಯ ಅನುಸಾರ ಗುತ್ತಿಗೆದಾರರಿಗೆ ಮೊತ್ತವನ್ನು ಪಾವತಿಸುವುದು.

13.ಯಾವುದೇ ಕಾರಣಕ್ಕೂ ನಿಲಯಪಾಲಕರ/ವಾರ್ಡನ್/ನಿಲಯ ಮೇಲ್ವಿಚಾರಕರ ಮೇಲೆ ಆಹಾರ ಸಾಮಗ್ರಿಗಳ ಸರಬರಾಜಿನ ಹೊಣೆಗಾರಿಕೆಯನ್ನು ವಹಿಸಬಾರದು. ಮೇಲೆ ಓದಲಾದ ಸರ್ಕಾರದ ಆದೇಶದಲ್ಲಿ ಆಹಾರ ಪದಾರ್ಥಗಳನ್ನು ವಿದ್ಯಾರ್ಥಿ ನಿಲಯಗಳ/ಆಶ್ರಮ ಶಾಲೆಗಳ ಬಾಗಿಲಿಗೆ ಸರಬರಾಜು ಮಾಡುವುದು ಗುತ್ತಿಗೆದಾರರ ಜವಾಬ್ದಾರಿಯಾಗಿರುತ್ತದೆ. ಈ ನಿಯಮದ ಅಚ್ಚುಕಟ್ಟು ಪಾಲನೆಯನ್ನು ಸಂಪೂರ್ಣವಾಗಿ ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯವರು ನಿರ್ವಹಿಸತಕ್ಕದ್ದು, ಲೋಪಗಳು ಕಂಡು ಬಂದಲ್ಲಿ ಅವರನ್ನು ಜವಾಬ್ದಾರರನ್ನಾಗಿ ಮಾಡಲಾಗುವುದು.

14.ಸರ್ಕಾರದ ಆದೇಶ ಸಂಖ್ಯೆ: ಹಿಂವಕ 586 ಬಿಎಂಎಸ್ 2018, ದಿನಾಂಕ: 07.04.2018 ರಡಿಯಲ್ಲಿ ವಿಧಿಸಲಾಗಿರುವ ಷರತ್ತು ಮತ್ತು ನಿಬಂಧನೆಗಳ ಪಾಲನೆ ಹಾಗೂ ಆಹಾರ ಸಾಮಗ್ರಿಗಳ ಸರಬರಾಜು ಅಥವಾ ಗುಣಮಟ್ಟದಲ್ಲಿ ಲೋಪದೋಷಗಳು ಕಂಡುಬಂದಲ್ಲಿ, ಅದರಂತೆ ಅಹಾರ ಸಾಮಗ್ರಿಗಳ ಸರಬರಾಜು ಗುತ್ತಿಗೆದಾರರಿಗೆ ವಿಧಿಸಿರುವ ದಂಡದ ವಿವರಗಳು ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ರವರ ಕಚೇರಿಯಲ್ಲಿ ಕಡ್ಡಾಯವಾಗಿ ನಿರ್ವಹಿಸತಕ್ಕದ್ದು.

15.ಕನಿಷ್ಠ 2 ತಿಂಗಳಿಗಳಿಗೊಮ್ಮೆ ನಿಲಯಪಾಲಕರ/ವಾರ್ಡನ್/ನಿಲಯ ಮೇಲ್ವಿಚಾರಕರ, ತಾಲ್ಲೂಕು ಕಲ್ಯಾಣಾಧಿಕಾರಿ, ಹಾಗೂ ಆಹಾರ ಸಾಮಗ್ರಿ ಸರಬರಾಜು ಮಾಡುವ ಗುತ್ತಿಗೆದಾರರನ್ನೊಳಗೊಂಡ ಸಭೆಯನ್ನು ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರು ಏರ್ಪಡಿಸುವುದು. ಮೇಲೆ ಓದಲಾದ ಆದೇಶದನುಸಾರ ಹಾಗೂ ಟೆಂಡರ್ ಕರಾರು ಪತ್ರದಲ್ಲಿ ವಿಧಿಸಿರುವ ಷರತ್ತು ನಿಬಂಧನೆಗಳ ಪಾಲನೆ ಬಗ್ಗೆ ಪರಿಶೀಲಿಸುವುದು ಹಾಗೂ ನಿಯಮಾನುಸಾರ ಅಗತ್ಯ ಕ್ರಮ ತೆಗೆದುಕೊಳ್ಳುವುದು.

ಕರ್ನಾಟಕ ರಾಜ್ಯ ಪಾಲಕರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

Shaheenparveen 30/11/2021

**(ಶಾಹೀನ್ ಪರ್ವೀನ್ ಕೆ.)**
ಸರ್ಕಾರದ ಅಧೀನ ಕಾರ್ಯದರ್ಶಿ-2,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು, (ಎ ಮತ್ತು ಇ), (ಲೆಕ್ಕಪರಿಶೋಧನೆ- 1 ಮತ್ತು 2), ಕರ್ನಾಟಕ ಬೆಂಗಳೂರು.

2. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
3. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಸಂಸ್ಥೆಗಳ ಸಂಘ, ಬೆಂಗಳೂರು.
4. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.(ಆಯುಕ್ತರು, ಹಿಂವಕ ಇಲಾಖೆ ಇವರ ಮುಖಾಂತರ)
5. ಎಲ್ಲಾ ಜಿಲ್ಲೆಗಳ ಮುಖ್ಯ ಕಾರ್ಯನಿರ್ವಹಕ ಅಧಿಕಾರಿಗಳು. (ಆಯುಕ್ತರು, ಹಿಂವಕ ಇಲಾಖೆ ಇವರ ಮುಖಾಂತರ)
6. ಎಲ್ಲಾ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ. (ಆಯುಕ್ತರು, ಹಿಂವಕ ಇಲಾಖೆ ಇವರ ಮುಖಾಂತರ)
7. ರಾಜ್ಯ ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
8. ಉಪ ನಿರ್ದೇಶಕರು, ಖಜನೆ ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಕೇಂದ್ರ, 2ನೇ ಮಹಡಿ ಸೌತ್ ಬ್ಲಾಕ್, ಖನಿಜ ಭವನ, ಬೆಂಗಳೂರು.
9. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ(ವೆಚ್ಚ 3 ಮತ್ತು 9) ವಿಧಾನಸೌಧ.

**ಪ್ರತಿ ಮಾಹಿತಿಗಾಗಿ:**

1. ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ.
3. ಸರ್ಕಾರದ ಉಪ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕರು, ವಿಕಾಸಸೌಧ.
4. ಸರ್ಕಾರದ ಅಧೀನ ಕಾರ್ಯದರ್ಶಿ-1(ಸಮನ್ವಯ), ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ವಿಕಾಸಸೌಧ.
5. ಶಾಖಾರಕ್ಷಾ ಕಡತ.